# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)

ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.


ಸಂಖ್ಯೆ:ಸದಂಕಾಸಂಸಂ/ನಗದು/04/2018–19

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ: 04.07.2018

## ಅಲ್ಪಾವಧಿ ಕೊಟೇಷನ್

**ವಿಷಯ**: ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಸ್ವಾಯತ್ತ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಲು ದರ ಪಟ್ಟಿ ಸಲ್ಲಿಸುವ ಕುರಿತು

**ಉಲ್ಲೇಖ**: ಸರ್ಕಾರದ ಪತ್ರ ಸಂಖ್ಯೆ: ಆಕುಕ 78 ಎಂಎಸ್ಎಫ್2018, ದಿ:31.05.2018

-----

ಸರ್ಕಾರಿ ದಂತ ಮಹಾವಿದ್ಯಾಲಯ, ಬೆಂಗಳೂರು ಸಂಸ್ಥೆಯನ್ನು ಸರ್ಕಾರವು ಸ್ವಾಯತ್ತ ಸಂಸ್ಥೆಯಾಗಿ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಎಂಬ ಹೆಸರಿನಲ್ಲಿ ಪರಿವರ್ತನೆ ಮಾಡಿ, ಪರಿವರ್ತಿತ ಸ್ವಾಯತ್ತ ಸಂಸ್ಥೆಯನ್ನು ಕರ್ನಾಟಕ ಸೊಸೈಟೀಸ್ ನೊಂದಣಿ ಕಾಯಿದೆ 1960 ಮತ್ತು 1961 ಅಡಿಯಲ್ಲಿ ನೋಂದಣಿ ಮಾಡಿಸಲು ಸೂಚಿಸಿದ ಹಿನ್ನಲೆಯಲ್ಲಿ ಅದರಂತೆ ನೋಂದಣಿಗೊಂಡು ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿರುವ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಂಸ್ಥೆಗೆ ತಗಲುವ ವೆಚ್ಚ ಭರಿಸಲು ದಿನಾಂಕ:01.08.2008 ರಿಂದ ಸರ್ಕಾರದಿಂದ ನೇರವಾಗಿ ಸಹಾಯಾನುದಾನ ಬಿಡುಗಡೆಯಾಗುತ್ತಿದೆ.

ಸಂಸ್ಥೆಗೆ ಹಾಲಿ ಸರ್ಕಾರದಿಂದ ಬಿಡುಗಡೆಯಾಗುವ ಸಹಾಯಾನುದಾನವು ಸೇರಿದಂತೆ ಅನುಭೋಗ ಶುಲ್ಕ, ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕ ಇತರೆ ವಿವಿಧ ಮೂಲಗಳಿಂದ ಬರುವ ವಾರ್ಷಿಕ ಮೊತ್ತ ಅಂದಾಜು ರೂ.22.00 ಕೋಟಿ (ಇಪ್ಪತ್ತೆರಡು ಕೋಟಿ) ಇರುತ್ತದೆ. ಉಲ್ಲೇಖದ ಸರ್ಕಾರದ ಪತ್ರದಂತೆ ದಿನಾಂಕ:01.04.2017ರಿಂದ 31.03.2018ರವರೆಗೆ ಸಂಸ್ಥೆಯ ಲೆಕ್ಕಪತ್ರಗಳನ್ನು ನಿಯಾಮಾನುಸಾರ ಲೆಕ್ಕ ಪರಿಶೋಧನೆ ಮಾಡಿ ವರದಿ ನೀಡಲು ಚಾರ್ಟರ್ಡ್ ಅಕೌಂಟೆಂಟ್ ನೇಮಿಸಲು ದರಪಟ್ಟಿ ಕರೆಯಲಾಗಿದೆ. ಆಸಕ್ತ ಲೆಕ್ಕಪರಿಶೋಧಕರು **ದಿನಾಂಕ:16.07.2018** ಬೆಳಿಗ್ಗೆ 11.00 ರೊಳಗೆ ಈ ಸಂಸ್ಥೆಯ ಡೀನ್ ಕಮ್ ನಿರ್ದೇಶಕರ ಕಛೇರಿಗೆ ದರಪಟ್ಟಿ ಸಲ್ಲಿಸಲು ಕೋರಿದೆ.

ಸಂಸ್ಥೆಯ ವತಿಯಿಂದ ಈ ಸಂಬಂಧ ಹೆಚ್ಚಿನ ಮಾಹಿತಿ ಇಚ್ಛಿಸಿದಲ್ಲಿ ದರಪಟ್ಟಿ ಸಲ್ಲಿಸುವ ಮೊದಲು ಈ ಕೆಳಗೆ ಸಹಿ ಮಾಡಿರುವವರಿಂದ ಅಥವಾ ಅವರು ಸೂಚಿಸಲ್ಪಟ್ಟವರಿಂದ ಕರ್ತವ್ಯದ ದಿನಗಳಲ್ಲಿ ಕಛೇರಿ ವೇಳೆ ಬೆಳಿಗ್ಗೆ 10.00 ರಿಂದ 5.00 ಗಂಟೆಯವರೆಗೆ ಪಡೆಯಬಹುದು. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ಕಾಯ್ದಿರಿಸಿಕೊಂಡಿರುತ್ತಾರೆ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

**ಪ್ರತಿಯನ್ನು ತಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಚಾರಕ್ಕಾಗಿ ಪ್ರಕಟಿಸಲು ಕೋರಲಾಗಿದೆ.**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ, ಬೆಂಗಳೂರು.
4. ನಿರ್ದೇಶಕರು, ಕಾರ್ಮಿಕ ವಿಮಾ ಸೇವೆಗಳು, ಬೆಂಗಳೂರು.
5. ನಿರ್ದೇಶಕರು, ಸಂಜಯಗಾಂಧಿ, ಅಪಘಾತ ಆಸ್ಪತ್ರೆ, ಬೆಂಗಳೂರು.
6. ನಿರ್ದೇಶಕರು, ನಿಮಾನ್ಸ್ ಆಸ್ಪತ್ರೆ, ಹೊಸೂರ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಬೆಂಗಳೂರು.
8. ಅಧೀಕ್ಷಕರು, ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.
9. ಅಧೀಕ್ಷಕರು, ವಾಣಿ ವಿಲಾಸ್ ಆಸ್ಪತ್ರೆ, ಬೆಂಗಳೂರು.
10. ಅಧೀಕ್ಷಕರು, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು.
11. ನಿರ್ದೇಶಕರು, ಕಿದ್ವಾಯಿ ಕ್ಯಾನ್ಸರ್ ಸ್ಮಾರಕ ಸಂಸ್ಥೆ, ಬೆಂಗಳೂರು.
12. ಡೀನ್ ಕಮ್ ನಿರ್ದೇಶಕರು, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
13. ಅಧೀಕ್ಷಕರು, ಮಿಂಟೋ ಕಣ್ಣಿನ ಆಸ್ಪತ್ರೆ, ಬೆಂಗಳೂರು.
14. ಅಧೀಕ್ಷಕರು, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.
15. ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು.
16. ಅಧೀಕ್ಷಕರು, ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ, ಬೆಂಗಳೂರು.
17. ಅಧೀಕ್ಷಕರು, ಎಸ್.ಡಿ.ಎಸ್ ಕ್ಷಯ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ಬೆಂಗಳೂರು.
18. ಅಧೀಕ್ಷಕರು, ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು.
19. ಕಛೇರಿ ಪ್ರತಿ.